**ದಿನಾಂಕಃ 24.02.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃಃ ಪ್ರತಿವಾದಿ ಪರ ವಕೀಲರಿಂದಃ</u>**

ನಿಪಿ-1 ರ ಸ್ವತ್ತಿನ ಚೆಕ್ಕುಬಂದಿ ದಕ್ಷಿಣಕ್ಕೆ ರಸ್ತೆ, ಪೂರ್ವಕ್ಕೆ ಬೇರೆಯವರ ಸ್ವತ್ತು, ಉತ್ತರಕ್ಕೆ ನನ್ನ ಸ್ವತ್ತು ಹಾಗೂ ಪಶ್ಚಿಮಕ್ಕೆ ನಮ್ಮ ಸ್ವತ್ತು ಹಾಗೂ ನಮ್ಮ ರಸ್ತೆ ಇದೆ. ನಿಪಿ-2 ರ ದಾಖಲೆಯನ್ನು ಯಾವ ಕಾರಣಕ್ಕೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿ ನುಡಿಯುತ್ತಾರೆ ಎಲ್ಲಾ ಮೂಲ ದಾಖಲಾತಿಗಳನ್ನು ಹಾಜರುಪಡಿಸಬೇಕು ಎಂದು ಹೇಳಿದ್ದ ಕಾರಣ ಆ ಕಾರಣಕ್ಕೆ ಎಲ್ಲಾ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ನಿಪಿ-1 ರ ಸ್ವತ್ತಿಗೂ ನಿಪಿ-2 ರ ದಾಖಲೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಿನಾಂಕ 03.03.2022 ರಂದು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಬಾಡಿಗೆ ಕರಾರನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಪ್ರತಿವಾದಿಯ ವಾಸದ ವಿಳಾಸ ನಿಮಗೆ ಹೇಳಬಹುದೇ ಎಂದರೆ ಸಾಕ್ಷಿ ನುಡಿಯುತ್ತಾರೆ ಅವರು ಹೈದರಾಬಾದ್‌ನಲ್ಲಿ ವಾಸ ಇರುತ್ತಾರೆ. 2015 ರಿಂದ ಪ್ರತಿವಾದಿ ಅಲ್ಲಿಯೇ ವಾಸ ಇದ್ದಾರೆ. ನಾನು ದಾವೆಯಲ್ಲಿ ಪ್ರತಿವಾದಿಯ ಸದರಿ ವಿಳಾಸವನ್ನು ನೀಡಿಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ ಅವರು ನನಗೆ ಆ ವಿಳಾಸವನ್ನು ಕೊಟ್ಟಿಲ್ಲ, ನಾವು ಎಲ್ಲಾ ಪತ್ರ ವ್ಯವಹಾರಗಳನ್ನು ದಾವಾ ಪತ್ರದಲ್ಲಿ ನಮೂದಿಸಿರುವ ನಮ್ಮ ಎಲ್ಲರ ಸ್ವಂತ ಮನೆಯ ವಿಳಾಸಕ್ಕೆ ಕಳುಹಿಸುವ ಕಾರಣ ಅದೇ ವಿಳಾಸವನ್ನು ನಾನು ದಾವಾ ಪತ್ರದಲ್ಲಿ ಪ್ರತಿವಾದಿಯ ವಿಳಾಸವನ್ನು ನೀಡಿರುತ್ತೇನೆ. ಸಾಕ್ಷಿ

ನುಡಿಯುತ್ತಾರೆ ಪ್ರತಿವಾದಿ ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ವಿಳಾಸದಲ್ಲಿಯೂ ವಾಸ ಇರುತ್ತಾರೆ. ದಾವಾ ಪತ್ರದಲ್ಲಿ ನಾನು ನಮೂದಿಸಿರುವ ಪ್ರತಿವಾದಿಯ ವಿಳಾಸದಲ್ಲಿ ಪ್ರತಿವಾದಿ ವಾಸ ಇಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ ಪ್ರತಿವಾದಿ ಅದೇ ವಿಳಾಸವನ್ನು ಖಾಯಂ ವಿಳಾಸವಾಗಿ ಎಲ್ಲಾ ಕಡೆ ನೀಡಿದ್ದು ಆ ವಿಳಾಸಕ್ಕೆ ಯಾವುದೇ ಪತ್ರ ವ್ಯವಹಾರಗಳಾದರೆ ಪ್ರತಿವಾದಿ ಅದಕ್ಕೆ ಪ್ರತಿಕ್ರಿಯೆ ಮಾಡುತ್ತಾರೆ. ದಾವಾ ಸ್ವತ್ತಿಗೂ ನಿಪಿ-3 ರ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ-6 ರ ಸ್ವತ್ತಿಗೂ ಈ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ ನನ್ನ ಇನ್ನೊಬ್ಬ ಸಹೋದರಿ ಅನಿತಾ ಪ್ರಸಾದ್ ರವರ ಮಗಳ ಹೆಸರಿನಲ್ಲಿ ನಾನು ಖರೀದಿಸಿದ್ದ ಇನ್ನೊಂದು ಸ್ವತ್ತನ್ನು ಅವರು ನನಗೆ ವಾಪಸ್ಸು ಕೊಟ್ಟಿದ್ದು ಆ ಬಗ್ಗೆ ನಾನು ಸದರಿ ದಾಖಲೆಯನ್ನು ಹಾಜರುಪಡಿಸಿದ್ದೇನೆ. ನಿಪಿ-6 ರ ದಾಖಲೆಯಲ್ಲಿನ ಸ್ವತ್ತನ್ನು ಖರೀದಿಸುವಾಗ ಅನಿತಾ ಪ್ರಸಾದ್ ರವರ ಮಗಳು ಆಸನಾ ಪ್ರಸಾದ್ ರವರಿಗೆ 2 ವರ್ಷ ವಯಸ್ಸಾಗಿತ್ತು. ನಿಪಿ-7 ರ ದಾಖಲೆಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ ನಾನು ನನ್ನ ಸಹೋದರಿಯ ಮಗಳ ಹೆಸರಿನಲ್ಲಿ ಖರೀದಿಸಿದ್ದ ಸ್ವತ್ತನ್ನು ನನ್ನ ಸಹೋದರಿಯ ಮಗಳು ನನ್ನ ಸಹೋದರಿಗೆ ದಾನ ಮಾಡಿರುತ್ತಾರೆ. ನಿಪಿ-1 ರ ಮಾರಾಟಗಾರರ ಮಾಲೀಕತ್ವದ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಪಿ-9 ರ ಪ್ರಕರಣಕ್ಕೂ ಈ ದಾವೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ-9 ರ ಪ್ರಕರಣ ದಾಖಲಿಸಲು ದೂರು ನೀಡಿದವರು ನನ್ನ ತಾಯಿ. ನಿಪಿ-9 ರ ಪ್ರಕರಣ ದಾಖಲಿಸಲು ನೀಡಿದ್ದ

ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ-9 ರ ಅಪರಾಧ ಪ್ರಕರಣದಲ್ಲಿ ಪೊಲೀಸರು ಬಿ ಅಂತಿಮ ವರದಿಯನ್ನು ಸಲ್ಲಿಸಿದ್ದು ಅದನ್ನು ನಾವು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು ಅದು ಬಾಕಿ ಇದೆ. ನಿಪಿ-9 ರ ದೂರನ್ನು ನನ್ನ ಒತ್ತಡದಿಂದ ನನ್ನ ತಾಯಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಬಿ ಅಂತಿಮ ವರದಿಯನ್ನು ನೀವು ಓದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನುಡಿಯುತ್ತಾರೆ ನನಗೆ ಕನ್ನಡ ಭಾಷೆ ಓದಲು ಬರುವುದಿಲ್ಲವಾದ ಕಾರಣ ನಾನು ಅದನ್ನು ಓದಿಲ್ಲ. ಸದರಿ ಬಿ ಅಂತಿಮ ವರದಿಯಲ್ಲಿ ಕಮಲಾಬಾಯಿ ರವರು ನನ್ನ ಮನೆಯಲ್ಲಿಯೇ ವಾಸವಾಗಿರುವುದರಿಂದ ತಮ್ಮಗಳ ವಿರುದ್ಧ ನಾನು ಇಲ್ಲ ಸಲ್ಲದ ಆರೋಪಗಳನ್ನು ಹೇಳಿ ಅವರುಗಳನ್ನು ದ್ವೇಷಿಸುವಂತೆ ಮಾಡಿ ಜೈಲಿಗೆ ಕಳುಹಿಸಬೇಕೆಂಬ ದುರುದ್ದೇಶದಿಂದ ನನ್ನ ತಾಯಿಯ ಕಡೆಯಿಂದ ದೂರನ್ನು ನೀಡುವುದಾಗಿ ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಕುಟುಂಬದ ಸದಸ್ಯರ ಮಧ್ಯೆ ಬೇರೆ ಬೇರೆ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಪ್ರಕರಣಗಳ ಬಗ್ಗೆ ನನಗೆ ಮಾಹಿತಿ ಇದೆ. ಆ ಪ್ರಕರಣಗಳ ಪೈಕಿ ಸಿವಿಲ್ ಮತ್ತು ರಿಟ್ ಪ್ರಕರಣಗಳು ನಾನು ಹಾಗೂ ನನ್ನ ತಾಯಿ ಪ್ರತಿವಾದಿಯ ವಿರುದ್ಧ ದಾಖಲಿಸಿರುವ ಪ್ರಕರಣಗಳು ಎಂದರೆ ಸರಿ.

ನಿಪಿ-10 ರ ದಾಖಲೆ ನಿಮ್ಮ ಬಳಿ ಹೇಗೆ ಬಂತು ಎಂದರೆ ಸಾಕ್ಷಿ ನುಡಿಯುತ್ತಾರೆ ಅದನ್ನು ನನಗೆ ಪ್ರತಿವಾದಿಯೇ ನೀಡಿದ್ದರು. ದಾವಾ ಸ್ವತ್ತಿನ ವಿಸ್ತೀರ್ಣ ಸುಮಾರು 5040 ಚದರ ಅಡಿಗಳು. ಬಾಡಿಗೆ ಕರಾರನ್ನು ಪೂರ್ತಿ ಸ್ವತ್ತಿಗೆ ಮಾಡಿಕೊಂಡಿದ್ದೀರಾ ಅಥವಾ ಭಾಗಶಃ ಸ್ವತ್ತಿಗೆ ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿ ನುಡಿಯುತ್ತಾರೆ ಪೂರ್ತಿ

ಸ್ವತ್ತಿನಲ್ಲಿ ಶಾಲೆ ಕಟ್ಟಿದ್ದು ಆ ಪೂರ್ತಿ ಸ್ವತ್ತಿಗೆ ಬಾಡಿಗೆ ಕರಾರು ಮಾಡಿಕೊಂಡಿರುತ್ತೇನೆ.

ಉದಯ ವಿದ್ಯಾ ಕೇಂದ್ರ ನಮ್ಮ ಕುಟುಂಬಕ್ಕೆ ಸಂಬಂಧಿಸಿದಂತೆ ವಿದ್ಯಾ ಸಂಸ್ಥೆ ಎಂದರೆ ಸರಿ. ಸದರಿ ಸಂಸ್ಥೆಯಲ್ಲಿ ನಾನು ಹಾಗೂ ನನ್ನ ತಾಯಿ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು ಎಂದರೆ ಸಾಕ್ಷಿ ನುಡಿಯುತ್ತಾರೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆ ಬಗ್ಗೆ ನನ್ನ ಪರವಾಗಿ ಆದೇಶ ಆಗಿರುತ್ತದೆ. ದಾವಾ ಸ್ವತ್ತನ್ನು ಖರೀದಿಸಿ ಅದರಲ್ಲಿ ಕಟ್ಟಡವನ್ನು ಕಟ್ಟಲು ಪೂರ್ತಿ ಹಣವನ್ನು ಪ್ರತಿವಾದಿಯೇ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಎಲ್ಲಾ ಆಸ್ತಿಗಳನ್ನು ನಾನು ನನ್ನ ಹೆಸರಿಗೆ ಮಾಡಿಕೊಂಡಂತೆಯೇ ದಾವಾ ಸ್ವತ್ತನ್ನು ಸಹಾ ನನ್ನಂತೆ ಮಾಡಿಕೊಳ್ಳಲು ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನೇ ಹಣವನ್ನು ತೊಡಗಿಸಿದ್ದರೆ ದಾವಾ ಸ್ವತ್ತನ್ನು ನನ್ನ ಅಪ್ರಾಪ್ತ ಮಗಳ ಹೆಸರಿನಲ್ಲಿ ಖರೀದಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ ನನಗೆ ಆಗ ವೈವಾಹಿಕ ಸಮಸ್ಯೆ ಇತ್ತು. ನನ್ನ ಗಂಡನ ಹೆಸರು ಜಿ.ಪಿ.ಶಾಂತಪ್ಪ ಪಾಟೀಲ್. ನಾನು ದುರುದ್ದೇಶದಿಂದ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿಗೆ ಯಾವುದೇ ಹಣವನ್ನು ಹೂಡಿಕೆ ಮಾಡಿಲಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ )

ಓ.ಹೇ.ಕೇ. ಸರಿ.ಇದೆ.

**(ವೇದ ಮೂರ್ತಿ ಬಿ.ಎಸ್)**
31 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ.